ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-01-1990.

# *ಸ್ಮೃತಿ ದಿನದ ಅಂಗವಾಗಿ ಅವ್ಯಕ್ತ ಬಾಪ್‌ದಾದಾರವರ ಮಹಾವಾಕ್ಯಗಳು*

(स्मृति दिवस पर अव्यक्त बापदादा के महावाक्य)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸರ್ವ ಮಕ್ಕಳ ಸ್ನೇಹಿ ಮಾತಪಿತಾ ತನ್ನ ಸ್ನೇಹಿ ಮಕ್ಕಳ ಸ್ನೇಹದ ಹೃದಯದ ಮತ್ತು ಸ್ನೇಹದಲ್ಲಿ ಅಮೂಲ್ಯ ಮುತ್ತುಗಳ ಮಾಲೆಯನ್ನು ನೋಡಿ-ನೋಡಿ ಮಕ್ಕಳಿಗೆ ಸ್ನೇಹದ ಮರುಪಾವತಿಯಾಗಿ ವಿಶೇಷ ವರದಾನಗಳನ್ನು ನೀಡುತ್ತಿದ್ದಾರೆ. "ಸದಾ ಸಮೀಪಭವ, ಸಮಾನ-ಸಮರ್ಥಭವ, ಸದಾ ಸಂಪನ್ನ ಸಂತುಷ್ಟಭವ" ಎಲ್ಲರ ಹೃದಯದ ಸ್ನೇಹವು ತಮ್ಮ ಹೃದಯದಲ್ಲಿ ಸಂಕಲ್ಪ ಬರುತ್ತಿದ್ದಂತೆಯೇ ಬಾಪ್‌ದಾದಾರವರ ಬಳಿ ಅತಿ ತೀವ್ರಗತಿಯಿಂದ ತಲುಪಿಬಿಡುತ್ತದೆ. ನಾಲ್ಕಾರು ಕಡೆಯ ದೇಶ-ವಿದೇಶದ ಮಕ್ಕಳು ಇಂದು ಪ್ರೀತಿಯ ಸಾಗರನಲ್ಲಿ ಲವಲೀನರಾಗಿದ್ದಾರೆ. ಬಾಪ್‌ದಾದಾ ಅದರಲ್ಲಿಯೂ ವಿಶೇಷವಾಗಿ ಬ್ರಹ್ಮಾತಾಯಿಯು ಮಕ್ಕಳನ್ನು ಸ್ನೇಹದಲ್ಲಿ ಲವಲೀನವಾಗಿ ಇರುವುದನ್ನು ನೋಡಿ ಸ್ವಯಂ ಮಕ್ಕಳ ಪ್ರೀತಿಯಲ್ಲಿ, ಸ್ನೇಹದಲ್ಲಿ ಸಮಾವೇಶವಾಗಿದ್ದಾರೆ. ಮಕ್ಕಳಿಗೆ ತಿಳಿದಿದೆ- ಬ್ರಹ್ಮಾತಾಯಿಗೆ ಮಕ್ಕಳಲ್ಲಿ ವಿಶೇಷವಾಗಿ ಸ್ನೇಹವಿತ್ತು ಮತ್ತು ಈಗಲೂ ಇದೆ. ಪಾಲನೆ ನೀಡುವಂತಹ ತಾಯಿಗೆ ಸ್ವತಹವಾಗಿಯೇ ವಿಶೇಷವಾಗಿ ಸ್ನೇಹವಿರುತ್ತದೆ ಆದ್ದರಿಂದ ಇಂದು ಬ್ರಹ್ಮಾತಾಯಿಯು ಒಂದೊಂದು ಮಗುವನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಮಕ್ಕಳ ಮನಸ್ಸಿನಲ್ಲಿ. ಬುದ್ಧಿಯಲ್ಲಿ, ಹೃದಯದಲ್ಲಿ, ನಯನಗಳಲ್ಲಿ ಮಾತಾಪಿತರ ವಿನಃ ಮತ್ಯಾರೂ ಇಲ್ಲ. ಎಲ್ಲಾ ಮಕ್ಕಳು ಮಕ್ಕಳು "ಒಂದುಬಲ ಒಂದು ಭರವಸೆಯಿಂದ ಮುಂದುವರೆಯುತ್ತಿದ್ದಾರೆ" ಒಂದುವೇಳೆ ಎಲ್ಲಿಯಾದರೂ ನಿಂತುಬಿಟ್ಟರೂ ಸಹ ಮಾತಪಿತಾರ ಸ್ನೇಹದ ಹಸ್ತವು ಪುನಃ ಸಮರ್ಥರನ್ನಾಗಿ ಮಾಡಿ ಮುಂದುವರೆಸುತ್ತದೆ.

ಇಂದು ಮಾತಾಪಿತಾ ಮಕ್ಕಳ ಶ್ರೇಷ್ಠಭಾಗ್ಯದ ಗೀತೆಯನ್ನು ಹಾಡುತ್ತಿದ್ದೆವು ಏಕೆಂದರೆ ಇಂದಿನ ದಿನ ವಿಶೇಷವಾಗಿ ಸೂರ್ಯಚಂದ್ರರು (ಬಾಪ್‌ದಾದಾ) ಬೆನ್ನೆಲುಬಾಗಿ ನಕ್ಷತ್ರಗಳನ್ನು (ಮಕ್ಕಳು) ವಿಶ್ವದ ಆಕಾಶದಲ್ಲಿ ಪ್ರತ್ಯಕ್ಷ ಮಾಡುವ ದಿನವಾಗಿದೆ. ಹೇಗೆ ಯಜ್ಞದ ಸ್ಥಾಪನೆಯ ಆದಿಯಲ್ಲಿ ಬ್ರಹ್ಮಾತಂದೆಯು ಮಕ್ಕಳ ಮುಂದೆ ತಮ್ಮದೆಲ್ಲವನ್ನೂ ಸಮರ್ಪಣೆ ಮಾಡಿದರು ಅರ್ಥಾತ್ ವಿಲ್ ಮಾಡಿದರು ಹಾಗೆಯೇ ಇಂದಿನ ದಿವಸದಂದು ಬ್ರಹ್ಮಾತಂದೆಯು ಮಕ್ಕಳಿಗೆ ಸರ್ವಶಕ್ತಿಗಳನ್ನು ವಿಲ್ ಮಾಡಿದರು ಅರ್ಥಾತ್ ವಿಲ್ ಪವರ್ಸನ್ನು ಕೊಟ್ಟರು. ಇಂದಿನದಿನ ನಯನಗಳ ಮೂಲಕ ಮತ್ತು ಸಂಕಲ್ಪಗಳ ಮೂಲಕ ತಂದೆಯು ಮಕ್ಕಳಿಗೆ ವಿಶೇಷವಾಗಿ "ಸನ್

ಶೋಸ್ ಫಾದರ್" (ಮಕ್ಕಳು ತಂದೆಯನ್ನು ಪ್ರತ್ಯಕ್ಷ ಮಾಡುವರು) ಎಂಬ ವಿಶೇಷ ಉಡುಗೊರೆಯನ್ನು ನೀಡಿದರು. ಇಂದಿನ ದಿವಸ ತಂದೆಯು ಪ್ರತ್ಯಕ್ಷ ಸಾಕಾರ ರೂಪದಲ್ಲಿ ಮಾಡಿ-ಮಾಡಿಸುವವರ ಪಾತ್ರವನ್ನು ಅಭಿನಯಿಸುವ ಪ್ರತ್ಯಕ್ಷ ರೂಪವನ್ನು ತೋರಿಸಿದರು. ಬ್ರಹ್ಮಾತಂದೆಯೂ ಸಹ ಇಂದಿನ ದಿನ ಪ್ರತ್ಯಕ್ಷ ರೂಪದಲ್ಲಿ ಮಾಡಿಸುವ ತಂದೆಯ ಜೊತೆಗಾರನಾದರು. ಮಾಡುವುದಕ್ಕಾಗಿ ಮಕ್ಕಳನ್ನು ನಿಮಿತ್ತ ಮಾಡಿದರು ಮತ್ತು ಮಾಡಿಸುವಂತಹ ಮಾತಾಪಿತಾ ಜೊತೆಗಾರನಾದರು. ಈ ದಿನ ಬ್ರಹ್ಮಾತಂದೆಯು ತಮ್ಮ ಸೇವೆಯ ರೀತಿ ಮತ್ತು ಗತಿ ಪರಿವರ್ತನೆ ಮಾಡಿದರು. ಈ ದಿನ ವಿಶೇಷವಾಗಿ ಬ್ರಹ್ಮಾತಂದೆಯು ದೇಹದಿಂದ ಸೂಕ್ಷ್ಮ ಫರಿಶ್ತಾ ಸ್ವರೂಪವನ್ನು ಧಾರಣೆ ಮಾಡಿಕೊಂಡು ಶ್ರೇಷ್ಠವತನ ಸೂಕ್ಷ್ಮ ವತನ ವಾಸಿಯಾದರು- ಏತಕ್ಕಾಗಿ? ಮಕ್ಕಳನ್ನು ತೀವ್ರಗತಿಯಿಂದ ಮೇಲೆತ್ತುವುದಕ್ಕಾಗಿ. ಮಕ್ಕಳನ್ನು ಫರಿಶ್ತಾ ರೂಪದಿಂದ ಹಾರಿಸುವುದಕ್ಕಾಗಿ. ಇಷ್ಟು ಶ್ರೇಷ್ಠ ಮಹತ್ವದ ದಿನವು ಇದಾಗಿದೆ. ಕೇವಲ ಸ್ನೇಹದ ದಿವಸವಲ್ಲ ಆದರೆ ವಿಶ್ವದ ಆತ್ಮರ ಬ್ರಾಹ್ಮಣ ಆತ್ಮರ ಮತ್ತು ಸೇವೆಯ ಗತಿಯ ಪರಿವರ್ತನೆಯು ಡ್ರಾಮಾದಲ್ಲಿ ನಿಗಧಿಯಾಗಿತ್ತು ಅದನ್ನು ಮಕ್ಕಳೂ ನೋಡುತ್ತಿದ್ದೀರಿ. ವಿಶ್ವದ ಆತ್ಮರಪ್ರತಿ ಬುದ್ಧಿವಂತರಿಗೂ ಬುದ್ಧಿವಂತನಾದರು. ಬುದ್ಧಿಯ ಪರಿವರ್ತನೆಯಾಯಿತು. ಸಂಪರ್ಕದಲ್ಲಿ ಬಂದರು ಸಹಯೋಗಿಗಳಾದರು. ಬ್ರಾಹ್ಮಣ ಅತ್ಮರಲ್ಲಿ ಶ್ರೇಷ್ಠ ಸಂಕಲ್ಪದ ಮೂಲಕ ತೀವ್ರಗತಿಯಿಂದ ವೃದ್ಧಿಯಾಯಿತು ಸೇವೆಯ ಪ್ರತಿ "ಸನ್ ಶೋಸ್ ಫಾದರ್"ನ ಉಡುಗೊರೆಯಿಂದ ವಿಹಂಗ ಮಾರ್ಗದ ಸೇವೆಯನ್ನು ಆರಂಭಿಸಿದರು. ಈ ಉಡುಗೊರೆಯು ಸೇವೆಗೆ ಒಂದು ಪಟ್ಟಿಯೇ ಆಯಿತು. ಪರಿವರ್ತನೆ ಆಯಿತಲ್ಲವೆ! ಇನ್ನುಮುಂದೆ ಸೇವೆಯಲ್ಲಿ ಮತ್ತಷ್ಟು ಪರಿವರ್ತನೆಯನ್ನು ನೋಡುವಿರಿ.

ಇಲ್ಲಿಯವರೆಗೂ ತಾವು ಬ್ರಾಹ್ಮಣ ಆತ್ಮರು ತಮ್ಮ ತನು-ಮನದ ಪರಿಶ್ರಮದಿಂದ ಕಾರ್ಯಕ್ರಮಗಳನ್ನು ಮಾಡುತ್ತಿದ್ದೀರಿ. ಸ್ಟೇಜನ್ನು ತಯಾರು ಮಾಡುತ್ತಿದ್ದೀರಿ. ನಿಮಂತ್ರಣ ಪತ್ರಗಳನ್ನು ಮಾಡಿಸುತ್ತಿದ್ದೀರಿ. ಯಾರಾದರೂ ಯಾರಾದರೂ ವಿ.ಐ.ಪಿಗಳನ್ನು ಕರೆಸುತ್ತಿದ್ದೀರಿ. ದೂರದರ್ಶನದವರನ್ನೂ ಸಹಯೋಗಿಗಳನ್ನಾಗಿ ಮಾಡುತ್ತಿದ್ದೀರಿ. ಹಣವನ್ನೂ ತೊಡಗಿಸುತ್ತಿದ್ದೀರಿ ಆದರೆ ಮುಂದೆ ಹೋದಂತೆ ತಾವು ಸ್ವಯಂ ವಿ.ಐ.ಪಿ ಆಗಿಬಿಡುವಿರಿ. ತಮಗಿಂತಲೂ ಹಿರಿಯರಾಗಿ ಮತ್ತಾರೂ ಕಾಣುವುದಿಲ್ಲ. ಮಾಡಿ-ಮಾಡಲ್ಪಟ್ಟ ಸ್ಟೇಜಿನ ಮೇಲೆ ಅನ್ಯರು ನಿಮಗೆ ನಿಮಂತ್ರಣ ನೀಡುತ್ತಾರೆ. ತಮ್ಮ ತನು-ಮನ-ಧನದ ಸೇವೆಯನ್ನು ತಾವೇ ಬಂದು ಸಲ್ಲಿಸುತ್ತಾರೆ. ತಮ್ಮನ್ನು ನಿವೇದನೆ ಮಾಡಿಕೊಳ್ಳುತ್ತಾರೆ- ತಾವು ಪರಿಶ್ರಮ ಪಡುವುದಿಲ್ಲ ಬದಲಾಗಿ ತಾವು ನಮ್ಮ ಬಳಿ ಬನ್ನಿರಿ ಎಂದು ಅವರೇ ಬಂದು ನಿವೇದನೆ ಮಾಡಿಕೊಳ್ಳುತ್ತಾರೆ ಆಗಲೇ ಪ್ರತ್ಯಕ್ಷತೆಯ ನಗಾರಿ ಮೊಳಗುವುದು ಮತ್ತು ಎಲ್ಲರ ಗಮನವು ತಾವು ಮಕ್ಕಳ ಮೂಲಕ ತಂದೆಯ ಕಡೆ ಹೋಗುವುದು. ಇದು ಹೆಚ್ಚು ಸಮಯ ನಡೆಯುವುದಿಲ್ಲ. ಎಲ್ಲರ ಗಮನವು ತಂದೆಯ ಕಡೆ ಹೋಗುವುದು ಅರ್ಥಾತ್ ಪ್ರತ್ಯಕ್ಷತೆಯಾಗುವುದು ಮತ್ತು ನಾಲ್ಕಾರುಕಡೆ ಜೈ-ಜೈಕಾರದ ಘಂಟೆಯು ಮೊಳಗುತ್ತದೆ. ಇದು ಡ್ರಾಮಾದಲ್ಲಿ ಸೂಕ್ಷ್ಮ ರಹಸ್ಯವು ಮಾಡಲ್ಪಟ್ಟಿದೆ. ಪ್ರತ್ಯಕ್ಷತೆಯ ನಂತರ ಅನೇಕ ಆತ್ಮರು ಆಶ್ಚರ್ಯ ಪಡುವರು ಮತ್ತು ಮಕ್ಕಳ ಪಶ್ಚಾತ್ತಾಪವನ್ನು ತಂದೆಯು ನೋಡಲು ಸಾಧ್ಯವಿಲ್ಲ ಆದ್ದರಿಂದ ಪರಿವರ್ತನೆ ಆಗಿಬಿಡುವುದು. ಈಗ ತಾವು ಬ್ರಾಹ್ಮಣ ಆತ್ಮರ ಶ್ರೇಷ್ಠ ಸ್ಥಿತಿಯು ಸದಾಕಾಲದ್ದು ತಯಾರಾಗುತ್ತಿದೆ. ತಮ್ಮ ಶ್ರೇಷ್ಠ ಸ್ಥಿತಿಯು ಸೇವೆಯ ಸ್ಟೇಜ್ ನ ನಿಮಂತ್ರಣವನ್ನು ತರಿಸುವುದು. ಬೇಹದ್ದಿನ ವಿಶ್ವದ ಸ್ಟೇಜಿನಲ್ಲಿ ಜೈ-ಜೈಕಾರದ ಪಾತ್ರವನ್ನು ಅಭಿನಯಿಸುತ್ತೀರಿ. ಸೇವೆಯ ಪರಿವರ್ತನೆಯನ್ನು ಕೇಳಿಸಿಕೊಂಡಿದ್ದೀರಾ?

ತಂದೆಯ ಅವ್ಯಕ್ತರಾಗುವುದೂ ಸಹ ಡ್ರಾಮಾದ ಗುಪ್ತ ರಹಸ್ಯದಲ್ಲಿ ತುಂಬಿತ್ತು. ಕೊನೆಪಕ್ಷ ಬ್ರಹ್ಮಾತಂದೆಯು ಅನುಮತಿಯನ್ನಾದರೂ ತೆಗೆದುಕೊಂಡು ಹೋಗಲಿಲ್ಲ ಎಂದು ಕೆಲವು ಮಕ್ಕಳು ಯೋಚಿಸುತ್ತಾರೆ ಅಂದಮೇಲೆ ತಾವು ಅನುಮತಿ ಕೊಡುತ್ತಿದ್ದೀರಾ? ಕೊಡುತ್ತಿರಲಿಲ್ಲ ಅಲ್ಲವೆ ಅಂದಮೇಲೆ ಬಲಶಾಲಿ ಯಾರಾದರು? ಒಂದುವೇಳೆ ನಿಮ್ಮಿಂದ ಅನುಮತಿ ತೆಗೆದುಕೊಂಡಿದ್ದರೆ ಕರ್ಮಾತೀತರಾಗಲು ಸಾಧ್ಯವಾಗುತ್ತಿರಲಿಲ್ಲ ಏಕೆಂದರೆ ರಕ್ತಸಂಬಂಧಕ್ಕಿಂತಲೂ ಪದಮದಷ್ಟು ಹೆಚ್ಚಿನದಾಗಿ ಆತ್ಮಿಕ ಸಂಬಂಧವಿರುತ್ತದೆ. ಅಂದಮೇಲೆ ಬ್ರಹ್ಮಾತಂದೆಯು ಕರ್ಮಾತೀತರಾಗಬೇಕಿತ್ತೋ ಅಥವಾ ಸ್ನೇಹದ ಬಂಧನದಲ್ಲಿ ಹೋಗಬೇಕಿತ್ತೋ? ಬ್ರಹ್ಮಾತಂದೆಯೂ ಹೇಳುತ್ತಾರೆ- ನಾಟಕವು ಕರ್ಮಾತೀತನನ್ನಾಗಿ ಮಾಡುವ ಬಂಧನದಲ್ಲಿ ಬಂಧಿಸಿತು ಮತ್ತು ಎಷ್ಟು ಸಮಯದಲ್ಲಿ ಬಂಧಿಸಿತು! ಸಮಯವು ಇದ್ದಿದ್ದರೆ ಮತ್ತೊಂದು ಪಾತ್ರವಾಗಿಬಿಡುತ್ತಿತ್ತು ಆದ್ದರಿಂದ ಕೆಲವೇ ಕ್ಷಣಗಳ

ಆಟವಾಗಿಬಿಟ್ಟಿತು. ಮಕ್ಕಳನ್ನೂ ಮುಗ್ಧರನ್ನಾಗಿ ಮಾಡಿಬಿಟ್ಟರು, ತಂದೆಯನ್ನೂ ಮುಗ್ಧರನ್ನಾಗಿ ಮಾಡಿಬಿಟ್ಟರು. ಇದಕ್ಕೆ "ವಾಹ್ ಡ್ರಾಮಾ ವಾಹ್" ಎಂದು ಹೇಳಲಾಗುತ್ತದೆ. ಯಾವಾಗ "ವಾಹ್ ಡ್ರಾಮಾ ವಾಹ್" ಆಗಿದೆ ಅಂದಮೇಲೆ ಮತ್ತಾವುದೇ ಸಂಕಲ್ಪ ಉತ್ಪನ್ನವಾಗಲು ಸಾಧ್ಯವಿಲ್ಲ. ಫುಲ್ ಸ್ಟಾಪ್ ಇಟ್ಟುಬಿಟ್ಟರಲ್ಲವೆ! ಇಲ್ಲವಾದರೆ ಕೊನೆಪಕ್ಷ . ಏನಾಗುತ್ತಿದೆ ಎಂದು ಮಕ್ಕಳಾದರೂ ಕೇಳಬಹುದಾಗಿತ್ತು ಆದರೆ ತಂದೆಯೂ ಮೌನ, ಮಕ್ಕಳೂ ಮೌನವಾಗಿದ್ದರು. ಇದಕ್ಕೇ ಡ್ರಾಮಾದ ವುಲ್ ಸ್ಟಾಪ್ ಎಂದು ಹೇಳುತ್ತಾರೆ. ಆ ಘಳಿಗೆಯಲ್ಲಂತೂ ಫುಲ್ ಸ್ಟಾಪ್ ಬಂದಿತಲ್ಲವೆ. ನಂತರದಲ್ಲಿ ಭಲೆ ಎಷ್ಟಾದರೂ ಪ್ರಶ್ನೆಗಳು ಉತ್ಪನ್ನವಾಗಿರಬಹುದು ಆದರೆ ಆ ಘಳಿಗೆಯಲ್ಲಿ ಏನೂ ಬರಲಿಲ್ಲ ಆದ್ದರಿಂದ "ವಾಹ್ ಡ್ರಾಮಾ ವಾಹ್" ಎಂದೇ ಹೇಳಬಹುದಲ್ಲವೆ! ಬಾಬಾ, ಬಾಬಾ ಎಂದು ಕರೆದುದೂ ಸಹ ನಂತರದಲ್ಲಿ. ಮೊದಲೇ ಕರೆಯಲಿಲ್ಲ. ಈ ಡ್ರಾಮಾದ ವಿಚಿತ್ರ ನಿಗಧಿಯು ಆಗಲೇಬೇಕಿತ್ತು ಮತ್ತು ಆಗಲೇಬೇಕಾಗಿದೆ. ಪರಿವರ್ತನಾಶೀಲ ನಾಟಕವು ಪಾತ್ರವನ್ನೂ ಪರಿವರ್ತನೆ ಮಾಡಿಬಿಡುತ್ತದೆ.

ಈ ಎಲ್ಲಾ ಟೀಚರ್ಸ್ ಮೆಜಾರಿಟಿ ಅವ್ಯಕ್ತ ರಚನೆ ಆಗಿದ್ದಾರೆ. ಸಾಕಾರ ತಂದೆಯ ಪಾಲನೆಯನ್ನು ಪಡೆದಂತಹ ಶಿಕ್ಷಕಿಯರು ಬಹಳ ಕಡಿಮೆಯಿದ್ದಾರೆ. ನಂತರ ಬಂದವರು ಬಹಳ ತೀವ್ರಗತಿಯಿಂದ ಜನ್ಮಪಡೆದಿದ್ದೀರಿ ಏಕೆಂದರೆ ಸಂಕಲ್ಪದ ಗತಿಯು ಎಲ್ಲದಕ್ಕಿಂತ ತೀವ್ರವಾಗಿದೆ. ಆದಿರತ್ನಗಳು ಮುಖವಂಶಾವಳಿಯಾಗಿದ್ದಾರೆ ಮತ್ತು ತಾವು ಸಂಕಲ್ಪದ ವಂಶಾವಳಿಯಾಗಿದ್ದೀರಿ ಆದ್ದರಿಂದ ಬ್ರಹ್ಮಾತಂದೆಯದು ಎರಡು ರಚನೆಗಳೆಂದು ಗಾಯನವಿದೆ. ಒಂದು ಮುಖವಂಶಾವಳಿ ಇನ್ನೊಂದು ಸಂಕಲ್ಪದ ಮೂಲಕ ಸೃಷ್ಟಿಯನ್ನು ರಚಿಸಿದರು. ಬ್ರಹ್ಮನ ರಚನೆಯೇ ಆಗಿದ್ದೀರಿ ಆದ್ದರಿಂದಲೇ ಬಿ.ಕೆ. ಎಂದು ಕರೆಸಿಕೊಳ್ಳುತ್ತೀರಿ. ಶಿವಕುಮಾರ-ಕುಮಾರಿಯೆಂದು ಕರೆಸಿಕೊಳ್ಳುವುದಿಲ್ಲ ಅಲ್ಲವೆ. ಡಬಲ್ ವಿದೇಶಿಯರೂ ಸಹ ಸಂಕಲ್ಪದ ರಚನೆಯಾಗಿದ್ದಾರೆ. ಇಷ್ಟು ತೀವ್ರಗತಿಯಿಂದ ಎಲ್ಲಾ ಶಿಕ್ಷಕಿಯರು ಮುಂದುವರೆಯುತ್ತಿದ್ದೀರಾ? ಯಾವಾಗ ನೀವು ತೀವ್ರತಿಯ ರಚನೆಯಾಗಿದ್ದೀರಿ ಅಂದಮೇಲೆ ಪುರುಷಾರ್ಥವೂ ತೀವ್ರಗತಿಯಿಂದ ನಡೆಯಬೇಕು. ಸದಾ ಇದನ್ನು ಪರಿಶೀಲನೆ ಮಾಡಿಕೊಳ್ಳಿ- ಸದಾ ತೀವ್ರಪುರುಷಾರ್ಥಿ ಆಗಿದ್ದೇನೆಯೇ ಅಥವಾ ಕೆಲಕೆಲವೊಮ್ಮೆ ಆಗಿದ್ದೇನೆಯೇ? ತಿಳಿಯಿತೇ? ಈಗ 'ಏಕೆ" "ಏನು" ಎಂಬ ಗೀತೆಯನ್ನು ಸಮಾಪ್ತಿ ಮಾಡಿರಿ. "ವಾಹ್-ವಾಹ್"ನ ಗೀತೆಯನ್ನು ಹಾಡಿರಿ. ಒಳ್ಳೆಯದು-

**ನಾಲ್ಕಾರು ಕಡೆಯ ಸರ್ವಸ್ನೇಹ ಮತ್ತು ಶಕ್ತಿಸಂಪನ್ನ ಶ್ರೇಷ್ಠ ಆತ್ಮರಿಗೆ, ಸದಾ ತಂದೆಯ ಜೊತೆಜೊತೆಗೆ ತೀವ್ರಗತಿಯಿಂದ ಪರಿವರ್ತನೆಯ ಜೊತೆಗಾರ ಸಮೀಪ ಆತ್ಮರಿಗೆ. ಸದಾ ತಮ್ಮ ಹಾರುವ ಕಲೆಯ ಮೂಲಕ ಅನ್ಯಆತ್ಮರನ್ನೂ ಹಾರಿಸುವಂತಹ ನಿರ್ಬಂಧನ ಹಾರುವ ಪಕ್ಷಿಗಳಿಗೆ, ಸದಾ "ಸನ್ ಶೋಸ್ ಫಾದರ್"ನ ಉಡುಗೊರೆಯ ಮೂಲಕ ಸ್ವಯಂ ಮತ್ತು ಸೇವೆಯಲ್ಲಿ ತೀವ್ರಗತಿಯಿಂದ ಪರಿವರ್ತನೆಯನ್ನು ತರುವಂತಹ ಸರ್ವ ಲವಲೀನ ಮಕ್ಕಳಿಗೆ ಈ ಮಹತ್ವ ದಿವಸದ ಮಹತ್ವಿಕೆಯ ಜೊತೆಗೆ ಮಾತಾಪಿತರ ವಿಶೇಷ ನೆನಪು, ಪ್ರೀತಿ ಹಾಗೂ ನಮಸ್ತೆ.**

**ಹುಬ್ಬಳ್ಳಿ ಜೋನಿನ ಸಹೋದರ-ಸಹೋದರಿಯರೊಂದಿಗೆ ಅವ್ಯಕ್ತ ಬಾಪ್‌ದಾದಾರವರ ವಾರ್ತಾಲಾಪ:**

ಸದಾ ತಮ್ಮನ್ನು ಪ್ರತೀ ಹೆಜ್ಜೆಯಲ್ಲಿ ಪದಮಗಳ ಸಂಪಾದನೆ ಮಾಡಿಕೊಳ್ಳುವಂತಹ ಪದಮಾಪದಮ ಭಾಗ್ಯಶಾಲಿಯೆಂದು ತಿಳಿಯುವಿರಾ? ಪ್ರತೀ ಹೆಜ್ಜೆಯಲ್ಲಿ ಪದಮ.... ಎಂಬ ಗಾಯನವೇನಿದೆಯೋ ಅದು ಯಾರಿಗಾಗಿ ಇದೆ? ಇಡೀ ದಿನದಲ್ಲಿ ಎಷ್ಟು ಪದಮಗಳನ್ನು ಜಮಾ ಮಾಡುತ್ತೀರಿ? ಸಂಗಮಯುಗವು ಅತಿಶ್ರೇಷ್ಠವಾದ ಸಂಪಾದನೆಯ ಸೀಜನ್ನಿನ ಯುಗವಾಗಿದೆ. ಅಂದಮೇಲೆ ಸೀಜನ್ನಿನಲ್ಲಿ ಏನು ಮಾಡುತ್ತಾರೆ? ಇಷ್ಟು ಗಮನವನ್ನಿಡುವಿರಾ? ಪ್ರತೀ ಸಮಯದಲ್ಲಿಯೂ ನೆನಪಿರಲಿ- ಈಗಿಲ್ಲದಿದ್ದರೆ ಮತ್ತೆಂದಿಗೂ ಇಲ್ಲ. ಯಾವ ಗಳಿಗೆ ಕಳೆದುಹೋಯಿತೋ ಅದು ಮತ್ತೆ ಬರುವುದಿಲ್ಲ. ಒಂದು ಗಳಿಗೆ ವ್ಯರ್ಥ ಹೋಯಿತೆಂದರೆ ಎಷ್ಟು ಪದಮಗಳು ವ್ಯರ್ಥವಾಯಿತು? ಪದಮಗಳ ವ್ಯರ್ಥವಾಯಿತು! ಆದ್ದರಿಂದ ಪ್ರತೀ ಗಳಿಗೆಯಲ್ಲಿ - ಈ ಸ್ಲೋಗನ್ ನೆನಪಿರಲಿ- "ಯಾರು ಸಮಯದ

ಮಹತ್ವವನ್ನು ತಿಳಿದಿರುತ್ತಾರೆಯೋ? ಅವರು ಸ್ವತಹವಾಗಿಯೇ ಮಹಾನ್ ಆಗುತ್ತಾರೆ" ಸ್ವಯಂನ್ನೂ ತಿಳಿದುಕೊಳ್ಳಬೇಕು ಹಾಗೂ ಸಮಯವನ್ನೂ ತಿಳಿಯಬೇಕು, ಎರಡೂ ವಿಶೇಷವಾದುದು ವಿಶೇಷವಾಗಿ ಈ ಸ್ಮೃತಿ ದಿನದಂದು ಸದಾ ಸಮರ್ಥರಾಗುವ ಶ್ರೇಷ್ಠ ಸಂಕಲ್ಪ ಮಾಡಿದ್ದೀರಾ?ವ್ಯರ್ಥ ಸಂಕಲ್ಪ. ಮಾತು, ಪ್ರತಿಯೊಂದು ರೂಪದಿಂದ ವ್ಯರ್ಥದ ಸಮಾಪ್ತಿ ಮಾಡುವ ದಿನವಾಗಿದೆ. ಯಾವಾಗ ವ್ಯರ್ಥವೇನು, ಸಮರ್ಥವೇನು ಎಂಬ ಜ್ಞಾನವು ಸಿಕ್ಕಿತು, ಅಂದಮೇಲೆ ಜ್ಞಾನಪೂರ್ಣ ಆತ್ಮನೆಂದಿಗೂ ಸಮರ್ಥವನ್ನು ಬಿಟ್ಟು ವ್ಯರ್ಥದ ಕಡೆಗೆ ಹೋಗಲು ಸಾಧ್ಯವಿಲ್ಲ. ಮತ್ತು ಯಾರೆಷ್ಟು ಸ್ವಯಂ ಸಮರ್ಥವಾಗುವರೋ ಅಷ್ಟು ಅನ್ಯರನ್ನೂ ಸಮರ್ಥರನ್ನಾಗಿ ಮಾಡಬಹುದು. 63 ಜನ್ಮಗಳನ್ನು ಕಳೆದಿರಿ ಮತ್ತು ಸಮರ್ಥರಾಗಲು ಇದೊಂದು ಜನ್ಮವಿದೆ ಅಂದಮೇಲೆ ಈ ಸಮಯವನ್ನೂ ವ್ಯರ್ಥವಾಗಿ ಕಳೆಯಬಾರದಲ್ಲವೆ! ತಮ್ಮ ದಿನಚರಿಯನ್ನು ಅಮೃತವೇಳೆಯಿಂದ ರಾತ್ರಿಯವರೆಗೂ ಹೇಗಿದೆ ಎಂದು ಪರಿಶೀಲನೆ ಮಾಡಿರಿ. ಕೇವಲ ರಾತ್ರಿಯಲ್ಲಿ ಚಾರ್ಟ್ ಪರಿಶೀಲನೆ ಮಾಡುವುದಲ್ಲ ಆದರೆ ಮಧ್ಯ-ಮಧ್ಯದಲ್ಲಿ ಪರಿಶೀಲಿಸಿರಿ. ಮತ್ತೆ-ಮತ್ತೆ ಪರಿಶೀಲನೆ ಮಾಡುವುದರಿಂದ ಪರಿವರ್ತನೆ ಮಾಡಿಕೊಳ್ಳಬಹುದು. ಒಂದುವೇಳೆ ರಾತ್ರಿಯಷ್ಟೇ ಪರಿಶೀಲಿಸುತ್ತೀರೆಂದರೆ ವ್ಯರ್ಥವೇನಾಯಿತು, ಅದು ವ್ಯರ್ಥದ ಖಾತೆಯಲ್ಲಿಯೇ ಹೋಗುವುದು ಆದ್ದರಿಂದ ಬಾಪ್‌ದಾದಾರವರು ಮಧ್ಯ-ಮಧ್ಯದಲ್ಲಿ ಟ್ರಾಫಿಕ್ ಕಂಟ್ರೋಲ್‌ನ ಸಮಯವನ್ನು ಫಿಕ್ಸ್ ಮಾಡಿದ್ದಾರೆ. ಟ್ರಾಫಿಕ್ ಕಂಟ್ರೋಲ್ ಮಾಡುತ್ತೀರಾ ಅಥವಾ ದಿನದಲ್ಲಿ ಬ್ಯುಸಿಯಾಗಿರುತ್ತೀರಾ? ತಮ್ಮ ನಿಯಮವನ್ನಾಗಿ ಮಾಡಿಕೊಳ್ಳಬೇಕು. ಭಲೆ ಸಮಯವು ಸ್ವಲ್ಪ ಬದಲಾಗಿಬಿಡುತ್ತದೆ ಆದರೆ ಒಂದುವೇಳೆ ಗಮನವಿದ್ದರೆ ಸಂಪಾದನೆಯು ಜಮಾ ಆಗುವುದು. ಆ ಸಮಯದಲ್ಲೇನಾದರೂ ಯಾವುದೇ ಕೆಲಸವಿದ್ದರೆ, ಅರ್ಧಗಂಟೆಯ ನಂತರ ಮಾಡಿರಿ ಆದರೆ ಮಾಡಬಹುದು. ಗಡಿಯಾರದ ಅನುಸಾರ ಏಕೆ ನಡೆಯುತ್ತೀರಿ. ತಮ್ಮ ಬುದ್ಧಿಯೇ ಗಡಿಯಾರವಾಗಿದೆ. ದಿವ್ಯಬುದ್ಧಿಯ ಗಡಿಯಾರದ ನೆನಪು ಮಾಡಿರಿ.ಯಾವ ಮಾತಿನ ಹವ್ಯಾಸವಾಗುತ್ತದೆಯೋ, ಅದರ ಅನುಸಾರ ವಸ್ತುವಿರುತ್ತದೆ. ತಾವು ಬಯಸದಿದ್ದರೂ ತನ್ನ ಕಡೆಗೆ ಸೆಳೆಯುತ್ತದೆ. ಯಾವಾಗ ಕೆಟ್ಟ ಹವ್ಯಾಸವೇ ತನ್ನ ಕಡೆಗೆ ಆಕರ್ಷಿಸುತ್ತದೆ. ಒಳ್ಳೆಯ ಸಂಸ್ಕಾರದಲ್ಲಿರಲು ಬಿಡುವುದಿಲ್ಲ ಅಂದಮೇಲೆ ಒಳ್ಳೆಯ ಸಂಸ್ಕಾರವನ್ನಾಗಿ ಏಕೆ ಮಾಡಿಕೊಳ್ಳಲು ಸಾಧ್ಯವಿಲ್ಲ!! ಅಂದಮೇಲೆ ಸದಾ ಪರಿಶೀಲನೆ ಮಾಡಿರಿ ಮತ್ತು ಪರಿವರ್ತನೆ ಮಾಡಿಕೊಳ್ಳುತ್ತೀರೆಂದರೆ ಸದಾಕಾಲಕ್ಕಾಗಿ ಸಂಪಾದನೆಯು ಜಮಾ ಆಗುತ್ತಿರುತ್ತದೆ. ಒಳ್ಳೆಯದು!

2. ತಮ್ಮನ್ನು ಸದಾ ರೂಪಭಸಂತ್ ಎಂದು ಅನುಭವ ಮಾಡುವಿರಾ? ರೂಪ್ ಭಸಂತ್ ಅರ್ಥಾತ್ ಜ್ಞಾನಆತ್ಮನೂ ಹೌದು ಹಾಗೂ ಯೋಗಿ ಆತ್ಮನೂ ಹೌದು. ಯಾವ ಸಮಯದಲ್ಲಿ ರೂಪ್ ಸಹ ಆಗಿಬಿಡಬಹುದು ಮತ್ತು ಯಾವ ಸಮಯದಲ್ಲಿ ಬೇಕಾದರೂ ಭಸಂತ್ ಆಗಿಬಿಡಿ. ಇದಕ್ಕಾಗಿ ತಮ್ಮೆಲ್ಲರ ಸ್ಲೋಗನ್ ಇದೆ- "ಯೋಗಿಯಾಗಿ ಮತ್ತು ಪವಿತ್ರರಾಗಿ ಅಂದರೆ ಜ್ಞಾನಿಯಾಗಿರಿ" ಅನ್ಯರಿಗೂ ಈ ಸ್ಲೋಗನ್ ನೆನಪು ತರಿಸುತ್ತೀರಲ್ಲವೆ. ಅಂದಮೇಲೆ ಇವೆರಡೂ ಸ್ಥಿತಿ ಸೆಕೆಂಡಿನಲ್ಲಿ ಮಾಡಿಕೊಳ್ಳಬಹುದು. ಆದರೆ ರೂಪ್ ಆಗಲು ಬಯಸುತ್ತೀರಿ, ಮತ್ತೆ ನೆನಪಿಗೆ ಬರುತ್ತದೆ ಜ್ಞಾನದ ಮಾತುಗಳು, ಹೀಗಾಗಬಾರದು. ಸೆಕೆಂಡಿಗಿಂತಲೂ ಕಡಿಮೆ ಸಮಯದಲ್ಲಿ ಫುಲ್ ಸ್ಟಾಪ್ ಇಡಬೇಕು. ಅದೂ ಸಹ ಹೀಗಾಗಬಾರದು- ಫುಲ್ ಸ್ಟಾಪ್ ಈಗಿಡುತ್ತೀರಿ, ಅದು ಮತ್ತೆ 5 ನಿಮಿಷಗಳ ನಂತರ ಆಗುತ್ತದೆ. ಇದಕ್ಕೆ ಶಕ್ತಿಶಾಲಿ ಬ್ರೇಕ್ ಎಂದು ಹೇಳುವುದಿಲ್ಲ. ಶಕ್ತಿಶಾಲಿ ಬ್ರೇಕ್‌ನ ಕೆಲಸವಾಗಿದೆ- ಎಲ್ಲಿಡಬೇಕೋ ಅಲ್ಲಿಯೇ ಇಡುವುದು. ಸೆಕೆಂಡಿಗಿಂತಲೂ ತಡವಾಗಿ ಇಡಲಾಯಿತೆಂದರೆ ಅಪಘಾತವಾಗುವುದು. ಫುಲ್ ಸ್ಟಾಪ್ ಎಂದರೆ ಬ್ರೇಕ್ ಶಕ್ತಿಶಾಲಿಯಾಗಿರುವುದು. ಎಲ್ಲಿ ಮನಸ್ಸು-ಬುದ್ಧಿಯನ್ನು ಜೋಡಿಸಬೇಕೋ ಅಲ್ಲಿ ಜೋಡಣೆಯಾಗಲಿ. ಇವು ತಾವು ಆತ್ಮರ ಶಕ್ತಿಗಳಾಗಿವೆ. ಆದ್ದರಿಂದ ಸದಾ ಇದನ್ನೇ ಅಭ್ಯಾಸ ಮಾಡುತ್ತಿರಿ- ಯಾವ ಸಮಯ. ಯಾವ ವಿಧಿಯಿಂದ ಮನಸ್ಸು-ಬುದ್ಧಿಯನ್ನು ಜೋಡಿಸಬೇಕೆಂದು ಬಯಸುತ್ತೀರಿ ಅದೇರೀತಿ ಆಗುತ್ತದೆಯೇ ಅಥವಾ ಸಮಯ ತೆಗೆದುಕೊಳ್ಳುತ್ತದೆಯೆ? ಪರಿಶೀಲನೆ ಮಾಡುತ್ತೀರಾ ಅಥವಾ ಇಡೀ ದಿನವು ಕಳೆದುಹೋದ ನಂತರ ರಾತ್ರಿಯಲ್ಲಿ ಪರಿಶೀಲನೆ ಮಾಡುತ್ತೀರಾ? ಮಧ್ಯ-ಮಧ್ಯದಲ್ಲಿ ಪರಿಶೀಲನೆ ಮಾಡಿರಿ. ಯಾವ ಸಮಯದಲ್ಲಿ ಬುದ್ಧಿಯು ಬಹಳ ಬ್ಯುಸಿಯಾಗಿರುವುದೋ ಆ ಸಮಯದಲ್ಲಿ ಟ್ರಯಲ್ ಮಾಡಿನೋಡಿರಿ- ಈಗೀಗ ಬುದ್ದಿಯನ್ನೇನಾದರೂ ಈ ಕಡೆಯಿಂದ ದೂರ ಮಾಡಿ, ತಂದೆಯ ಕಡೆ ಜೋಡಿಸಬೇಕೆಂದು ಬಯಸಿದರೆ ಸೆಕೆಂಡಿನಲ್ಲಿ ಮಾಡಬಹುದೇ? ಹಾಗೆ ನೋಡಿದರೆ ಸೆಕೆಂಡ್ ಸಹ ಬಹಳಷ್ಟಾಯಿತು.

ಇದಕ್ಕೆ ನಿಯಂತ್ರಣಾ ಶಕ್ತಿ ಎಂದು ಹೇಳಲಾಗುವುದು. ಯಾರಲ್ಲಿ ಈ ಶಕ್ತಿಯಿರುವುದಿಲ್ಲವೋ ಆಡಳಿತ ಮಾಡುವ ಶಕ್ತಿಯ ಅಧಿಕಾರಿಯಾಗಲು ಸಾಧ್ಯವಿಲ್ಲ. ಈಗ ಸ್ವರಾಜ್ಯದ ಲೆಕ್ಕದಿಂದ ಶಾಸಕರಾಗಿರಿ. ಸ್ವರಾಜ್ಯ ಸಿಕ್ಕಿದೆಯಲ್ಲವೆ! ಕಣ್ಣುಗಳಿಗೆ ಇದನ್ನು ನೋಡು ಎಂದು ಹೇಳುವಿರಿ ನಂತರ ಅದು ಬೇರೆಯದನ್ನು ನೋಡುವಂತೆ ಆಗಬಾರದು, ಕಿವಿಗಳಿಗೆ ಇದನ್ನು ಕೇಳಬಾರದು ಎಂದು ಹೇಳುತ್ತೀರಿ ಆದರೆ ಕೇಳುತ್ತಲೇ ಇರುತ್ತದೆ. ಇದಕ್ಕೆ ನಿಯಂತ್ರಣಾ ಶಕ್ತಿಯೆಂದು ಹೇಳುವುದಿಲ್ಲ ಎಂದಿಗೂ ಯಾವುದೇ ಕರ್ಮೇಂದ್ರಿಯವು ಮೋಸ ಮಾಡಬಾರದು. ಇದಕ್ಕೆ ಸ್ವರಾಜ್ಯವೆಂದು ಹೇಳಲಾಗುವುದು. ಅಂದಮೇಲೆ ರಾಜ್ಯಾಡಳಿತ ಮಾಡಲು ಬರುತ್ತದೆಯಲ್ಲವೆ? ಒಂದುವೇಳೆ ರಾಜನ ಆಜ್ಞೆಯನ್ನು ಪ್ರಜೆಯು ಪಾಲಿಸುವುದಿಲ್ಲವೆಂದರೆ ಆ ರಾಜನು ಹೆಸರಿಗಷ್ಟೇ ರಾಜನೋ ಅಥವಾ ಕಾರ್ಯ ಮಾಡುವುದಕ್ಕಾಗಿಯೂ ರಾಜನೇ? ಆತ್ಮದ ಅನಾದಿ ಸ್ವರೂಪವೇ ರಾಜನಾಗಿರುವುದು, ಮಾಲೀಕನಾಗಿರುವುದು. ಈ ಪರತಂತ್ರತೆಯಂತು ನಂತರದಲ್ಲಿ ಬಂದಿದೆ ಆದರೆ ಆದಿ ಮತ್ತು ಅನಾದಿ ಸ್ವರೂಪ ಸ್ವತಂತ್ರವಾಗಿರುವುದು. ಅಂದಮೇಲೆ ಆದಿ ಮತ್ತು ಅನಾದಿ ಸ್ವರೂಪ ಸ್ವತಂತ್ರವಾಗಿರುವುದು ಅಂದಮೇಲೆ ಈ ಸ್ವರೂಪವು ಸಹಜವಾಗಿಯೇ ನೆನಪಿಗೆ ಬರುವುದಲ್ಲವೆ. ಸ್ವತಂತ್ರವಾಗಿದ್ದೀರಾ ಅಥವವಾ ಅಲ್ಪಸ್ವಲ್ಪ ಪರತಂತ್ರವಾಗಿದ್ದೀರಾ? ಮನಸ್ಸಿನ ಬಂಧನವೂ ಇಲ್ಲ. ಒಂದುವೇಳೆ ಮನಸ್ಸಿನ ಬಂಧನವಿರುತ್ತದೆ ಎಂದರೆ ಈ ಬಂಧನವು ಅನ್ಯ ಬಂಧನಗಳನ್ನು ಕರೆತರುತ್ತದೆ. ಎಷ್ಟೊಂದು ಜನ್ಮಗಳು ಬಂಧನದಲ್ಲಿದ್ದು ನೋಡಿದ್ದೀರಾ! ಈಗಲೂ ಬಂಧನವು ಇಷ್ಟವಾಗುವುದೇ? ಬಂಧನಮುಕ್ತ ಅರ್ಥಾತ್ ರಾಜಾ, ಸ್ವರಾಜ್ಯ ಅಧಿಕಾರಿ ಏಕೆಂದರೆ ಬಂಧನವು ಪ್ರಾಪ್ತಿಗಳ ಅನುಭವ ಮಾಡಲು ಬಿಡುವುದಿಲ್ಲ ಆದ್ದರಿಂದ ಸದಾ ಬ್ರೇಕ್ ಶಕ್ತಿಶಾಲಿಯಾಗಿ ಇಟ್ಟುಕೊಂಡಾಗ, ಅಂತ್ಯದಲ್ಲಿ ಗೌರವಾನ್ವಿತವಾಗಿ ತೇರ್ಗಡೆಯಾಗುವಿರಿ ಅರ್ಥಾತ್ ಮೊದಲ ದರ್ಜೆಯಲ್ಲಿ ಬರುವಿರಿ. ಫಸ್ಟ್ ಎಂದರೆ ಫಾಸ್ಟ್, ನಿಧಾನ-ನಿಧಾನದವರಲ್ಲ, ಯಾವಾಗ ಎತ್ತರದ ದಾರಿಯಲ್ಲಿ ಹೋಗುತ್ತೀರೆಂದರೆ ಮೊದಲು ಬ್ರೇಕ್‌ನ್ನು ಪರಿಶೀಲಿಸುತ್ತಾರೆ. ತಾವೆಷ್ಟು ಶ್ರೇಷ್ಠಮಟ್ಟಕ್ಕೆ ಹೋಗುತ್ತೀರಿ! ಅಂದಮೇಲೆ ಬ್ರೇಕ್ ಶಕ್ತಿಶಾಲಿ ಆಗಿರಬೇಕಲ್ಲವೆ! ಪದೇ-ಪದೇ ಪರಿಶೀಲನೆ ಮಾಡಿರಿ. ಈ ರೀತಿ ಆಗಬಾರದು- ತಾವು ಬ್ರೇಕ್ ಬಹಳ ಚೆನ್ನಾಗಿದೆ ಎಂದು ತಿಳಿಯುತ್ತೀರಿ ಆದರೆ ಸಮಯದಲ್ಲಿ ಬ್ರೇಕ್ ಹಿಡಿಯುವುದಿಲ್ಲವೆಂದರೆ ಮೋಸವಾಗಿಬಿಡುವುದು ಆದ್ದರಿಂದ ಅಭ್ಯಾಸ ಮಾಡಿರಿ- ಸ್ಟಾಪ್ ಎಂದು ಹೇಳಿದರೆಂದರೆ ಸ್ಟಾಪ್ ಆಗಿಬಿಡಬೇಕು.ರಿದ್ದಿ- ಸಿಧ್ಧಿಯವರೇನು ಮಾಡುತ್ತಾರೆ? ಸಿಧ್ಧಿಯನ್ನು ತೋರಿಸುತ್ತಾರೆ- ಚಲಿಸುತ್ತಿರುವ ರೈಲನ್ನು ನಿಲ್ಲಿಸಿಬಿಡುತ್ತಾರೆ ಆದರೆ ಅದರಿಂದ ಲಾಭವೇನು! ತಾವು ಸಂಕಲ್ಪಗಳ ಟ್ರಾಫಿಕ್‌ನ್ನು ಸ್ಟಾಪ್ ಮಾಡುತ್ತೀರಿ.ಇದರಿಂದ ಬಹಳಷ್ಟು ಲಾಭವಿದೆ. ತಮ್ಮದು "ವಿಧಿಯಿಂದ ಸಿದ್ದಿ ಮತ್ತು ಅವರದಾಗಿದೆ ರಿದ್ದಿ-ಸಿಧ್ಧಿ".ಅದು ಅಲ್ಪಕಾಲದ್ದಾಗಿದೆ. ಇದು ಸದಾಕಾಲದ್ದಾಗಿದೆ.ಅಂದಮೇಲೆ ಎಲ್ಲರೂ ಜ್ಞಾನಪೂರ್ಣರಾಗಿಬಿಟ್ಟರು. ರಚಯಿತ ಮತ್ತು ರಚನೆಯ ಸಂಪೂರ್ಣ ಜ್ಞಾನವು ತಿಳಿದುಬಂದಿದೆ. ಪ್ರಪಂಚದವರು ತಿಳಿಯುತ್ತಾರೆ- ಮಾತೆಯರೇನು ಮಾಡುವರು! ಮತ್ತು ಮಾತೆಯರು ಅಸಂಭವವನ್ನೂ ಸಂಭವ ಮಾಡಿಬಿಡುತ್ತಾರೆ. ಇಂತಹ ಶಕ್ತಿಯರಲ್ಲವೇ? ಒಳ್ಳೆಯದು-

ಅವ್ಯಕ್ತ ಮುರಳಿ/ ರಿವೈಸ್ ಕೋರ್ಸ್ 18-01-1990.

***ಸ್ಮೃತಿ ದಿನದ ಅಂಗವಾಗಿ ಅವ್ಯಕ್ತ ಬಾಪ್‌ದಾದಾರವರ ಮಹಾ ವಾಕ್ಯಗಳು.***

ಮಕ್ಕಳನ್ನು ತೀವ್ರ ಗತಿಯಿಂದ ಮೇಲೆತ್ತುವುದಕ್ಕಾಗಿ, ಮಕ್ಕಳನ್ನು ಫರಿಶ್ತಾ ರೂಪದಿಂದ ಹಾರಿಸುವುದಕ್ಕಾಗಿ ಬ್ರಹ್ಮಾ ತಂದೆ ಸೂಕ್ಷ್ಮ ಫರಿಶ್ತಾ ಸ್ವರೂಪವನ್ನು ಧಾರಣೆ ಮಾಡಿಕೊಂಡು ಸೂಕ್ಷ್ಮವತನದ ನಿವಾಸಿಯಾದರು. ಎಂದು ಹೇಳುತ್ತಾ ಶಿವ ಪರಮಾತ್ಮ ತಿಳಿಸಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪರಮಾತ್ಮನಿಂದ ಸದಾ ಸಮೀಪ ಭವ! ಸದಾ ಸಮಾನ ಸಮರ್ಥ ಭವ! ಸಂಪನ್ನ ಸಂತುಷ್ಟ ಭವ! ಎಂಬ ವಿಶೇಷ ವರದಾನಗಳನ್ನು ಸ್ವೀಕರಿಸಿದ್ದೇನೆ.

2. ನಾನು ಬ್ರಹ್ಮಾ ತಾಯಿಯ ಪ್ರೀತಿಯಲ್ಲಿ, ಸ್ನೇಹದಲ್ಲಿ ಲವಲೀನವಾಗಿ ಇದ್ದೇನೆ.

3. ನನ್ನ ಬುದ್ಧಿಯಲ್ಲಿ, ಹೃದಯದಲ್ಲಿ, ನಯನಗಳಲ್ಲಿ ತಾಯಿ-ತಂದೆಯ ಹೊರತು ಮತ್ಯಾರೂ ಇಲ್ಲ.

4. ನಾನು ಒಂದೇಬಲ ಒಂದೇ ಭರವಸೆಯಿಂದ ಮುಂದಕ್ಕೆ ಹೋಗುತ್ತಿದ್ದೇನೆ.

5. ಮಾತಾಪಿತಾ ನನ್ನ ಶ್ರೇಷ್ಠ ಭಾಗ್ಯದ ಗೀತೆಯನ್ನು ಹಾಡುವಷ್ಟು ಶ್ರೇಷ್ಠ ಭಾಗ್ಯವಂತನು.

6. ತಂದೆ ನನಗೆ ನೀಡಿರುವ  ಸರ್ವ ಶಕ್ತಿಗಳನ್ನು, ಸರ್ವ ಅಧಿಕಾರಗಳನ್ನು ಸೇವೆಯಲ್ಲಿ ಉಪಯೋಗಿಸಿದ್ದೇನೆ.

7. ನಾನು ನಯನಗಳಿಂದ ಮತ್ತು ಸಂಕಲ್ಪದಿಂದ "ತಂದೆಯನ್ನು ಪ್ರತ್ಯಕ್ಷ ಮಾಡುವ ಮಗು" ಎಂಬ ಉಡುಗೊರೆಯನ್ನು ಪರಮಾತ್ಮ ನನಗೆ ಕೊಟ್ಟಿದ್ದಾರೆ.

8. ನಾನು ತನು ಮತ್ತು ಮನಸ್ಸಿನ ಸೇವೆಯಿಂದ ತಂದೆಯನ್ನು ಪ್ರತ್ಯಕ್ಷ ಮಾಡಿದ ಸಲುವಾಗಿ ನಾಲ್ಕು ಕಡೆಯಿಂದ  ಜೈ-ಜೈಕಾರದ ನಗಾರಿ ಮೊಳಗಿದೆ.

9. ನಾನು ಬ್ರಹ್ಮಾ ತಂದೆಯ ಸಂಕಲ್ಪದಿಂದ  ಜನ್ಮವನ್ನು ಪಡೆದಿರುವ ಅವ್ಯಕ್ತ ರಚನೆ.